# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 723 |
| ಸದಸ್ಯರ ಹೆಸರು | : | ಶ್ರೀ ನಸೀರ್ ಅಹ್ಮದ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 22.02.2023 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕಸಬಾ ಹೋಬಳಿಯ ಮದ್ದೂರು ಗ್ರಾಮದ ಸರ್ವೆ ನಂ.51ರಲ್ಲಿ ಒಳಗೊಂಡಿರುವ ಜಮೀನಿನ ವಿವರ ಮತ್ತು ಯಾವ್ಯಾವ ಉದ್ದೇಶಗಳಿಗೆ ಎಷ್ಟು ವಿಸ್ತೀರ್ಣದ ಜಮೀನು ಯಾರ್ಯಾರಿಗೆ ಯಾವ ದಿನಾಂಕ ಮಂಜೂರಾಗಿದೆ; (ವಿವರ ನೀಡುವುದು) | ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಮದ್ದೂರು ಗ್ರಾಮದ ಸ.ನಂ. 51 ರಲ್ಲಿ ಆಕಾರ್‌ಬಂದ್‌ನಂತೆ ಒಟ್ಟು 1-15 ಎಕರೆ ಜಮೀನಿರುತ್ತದೆ.<br>ಸದರಿ ಜಮೀನನ್ನು ಈ ಕೆಳಕಂಡವರಿಗೆ ಮಂಜೂರು ಮಾಡಲಾಗಿದೆ. |

| ಕ್ರ. ಸಂ. | ಮಂಜೂರಾತಿದಾರರ ಹೆಸರು | ವಿಸ್ತೀರ್ಣ (ಗುಂಟೆ) | ಉದ್ದೇಶ/ ದಿನಾಂಕ |
|---|---|---|---|
| 1. | ಶ್ರೀ ಚಲವಯ್ಯ ಬಿನ್ ಮಾದೇಗೌಡ | 0-03 | ವ್ಯವಸಾಯೇತರ 23.08.1986 |
| 2. | ಶ್ರೀ ಚಂದ್ರು ಬಿನ್ ಕುಳ್ಳಯ್ಯ | 0-02 | ವ್ಯವಸಾಯೇತರ 23.08.1986 |
| 3. | ಶ್ರೀಮತಿ ಜಯಮ್ಮ ಕೋಂ ಲೇಟ್ ರಾಜಣ್ಣ | 0-02 | ವ್ಯವಸಾಯೇತರ 23.08.1986 |
| 4. | ಶ್ರೀ ಶ್ರೀಕಂಠಾಚಾರ್ ಬಿನ್ ರುದ್ರಾಚಾರ್ | 0-02 | ವ್ಯವಸಾಯೇತರ 23.08.1986 |
| 5. | ಶ್ರೀ ಹನುಮಯ್ಯ ಬಿನ್ ಚಟ್ಟುಳಯ್ಯ | 0-03 | ವ್ಯವಸಾಯೇತರ 23.08.1986 |
| 6. | ಶ್ರೀ ಕೆಂಪಚಾರಿ ಬಿನ್ ಚನ್ನಾಚಾರಿ | 0-03 | ವ್ಯವಸಾಯೇತರ 23.08.1986 |
| 7. | ಶ್ರೀ ಅಂಕಯ್ಯ ಬಿನ್ ಕೆಂಪಯ್ಯ | 0-02 | ವ್ಯವಸಾಯೇತರ 09.04.1975 |
| 8. | ಶ್ರೀ ನಿಂಗಯ್ಯ ಬಿನ್ ಮರಿಚನ್ನಯ್ಯನ ನಿಂಗಯ್ಯ | 0-05 | ವ್ಯವಸಾಯೇತರ 20.10.1993 |
| 9. | ಶ್ರೀ ಲಕ್ಷ್ಮಣರಾಜು ಬಿನ್ ರಾಮಯ್ಯ | 0-04 | ವ್ಯವಸಾಯೇತರ - |
| 10. | ಶ್ರೀ ಚನ್ನಪ್ಪ ಬಿನ್ ಮಾದಯ್ಯ | 0-03 | ವ್ಯವಸಾಯೇತರ - |
| 11. | ಶ್ರೀ ಎಸ್.ವಿ. ಅಪ್ಪಾಜಿ ಬಿನ್ ಸಿದ್ದಾಚಾರಿ | 0-02 | ವ್ಯವಸಾಯೇತರ - |
| 12. | ಶ್ರೀ ಎನ್ ಆರ್. ರಂಗನಾಥ್ | 0-10 | ವ್ಯವಸಾಯೇತರ 08.12.1967 |
| 13. | ಶ್ರೀ ಚನ್ನಪ್ಪ ಬಿನ್ ಸೋಸಿ ಮಾದಯ್ಯ | 0-04 | ಉತ್ತಮ ಬೇಸಾಯ 24.07.1989 |

| | | |
|---|---|---|
| (ಆ) | ಸದರಿ ಸರ್ವೆ ನಂ.ನಲ್ಲಿ 7 ಗುಂಟೆ ಜಮೀನನ್ನು ಯಾರ ಹೆಸರಿಗೆ ಮತ್ತು ಯಾವಾಗ ಮಂಜೂರು ಮಾಡಲಾಗಿದೆ; ಮಂಜೂರಾತಿಯ ಪ್ರತಿ ನೀಡುವುದು; ಮಂಜೂರಾದ ದಿನಾಂಕದಿಂದ ಜಮೀನಿನಲ್ಲಿ ಸದರಿಯವರು ಅನುಭವ ಅಥವಾ ಸ್ವಾಧೀನದಲ್ಲಿದ್ದಾರೆಯೇ; (ಮಾಹಿತಿ ನೀಡುವುದು) | ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಮದ್ದೂರು ಗ್ರಾಮದ ಸ.ನಂ. 51 ರಲ್ಲಿ ಏಳು ಗುಂಟೆ ಜಮೀನು ಮಂಜೂರಾಗಿರುವ ಪ್ರಕರಣ ಇರುವುದಿಲ್ಲ. |
| (ಇ) | ಸದರಿ ಸರ್ವೆ ನಂ.ನಲ್ಲಿ ಮೊದಲನೆಯ ಫಲಾನುಭವಿಗೆ ಮಂಜೂರಾದ ಜಮೀನಿನಲ್ಲಿ ಸ್ವಲ್ಪ ಭಾಗದ ಜಮೀನನ್ನು ಇನ್ನೊಬ್ಬ ಫಲಾನುಭವಿಗೆ ಮಂಜೂರು ಮಾಡಿರುವುದು ನಿಜವೇ ಹಾಗಿದ್ದಲ್ಲಿ, ಯಾವ್ಯಾವ ದಿನಾಂಕಗಳಂದು ಯಾರ್ಯಾರಿಗೆ ಮಂಜೂರು ಮಾಡಲಾಗಿದೆ; (ವಿವರ ನೀಡುವುದು) | ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಮದ್ದೂರು ಗ್ರಾಮದ ಸ.ನಂ. 51 ರಲ್ಲಿ ಏಳು ಗುಂಟೆ ಜಮೀನು ಮಂಜೂರಾಗಿರುವ ಪ್ರಕರಣ ಇರುವುದಿಲ್ಲ. ಆದರೆ ಶ್ರೀ ರಂಗನಾಥ್ ರವರಿಗೆ ದಿನಾಂಕ 08.12.1967 ರಂದು ಮಂಜೂರಾಗಿದ್ದ ಹತ್ತು ಗುಂಟೆ ಜಮೀನಿನ ಪೈಕಿ ನಾಲ್ಕು ಗುಂಟೆ ಜಮೀನನ್ನು ದಿನಾಂಕ 24.07.1989 ರಂದು ಶ್ರೀ ಚನ್ನಪ್ಪ ಬಿನ್ ಸೋಸಿಮಾದಯ್ಯ ಎಂಬುವವರಿಗೆ ಮಂಜೂರು ಮಾಡಿರುವುದು ಆರ್.ಟಿ.ಸಿ. ದಾಖಲೆಯಂತೆ ಕಂಡುಬಂದಿರುತ್ತದೆ. |
| (ಈ) | ಮೊದಲನೆಯ ಫಲಾನುಭವಿಗೆ ಮಂಜೂರಾದ ಜಮೀನಿನಲ್ಲಿ ಅಲ್ಪಭಾಗದ ಜಮೀನನ್ನು ತಹಶೀಲ್ದಾರ್ ಅಥವಾ ಎ.ಸಿ.ರವರ ಆದೇಶದಂತೆ ರದ್ದು ಮಾಡಿರುವುದು ನಿಜವೇ; ಹಾಗಿದ್ದಲ್ಲಿ ರದ್ದಾಗಿರುವ ಆದೇಶಗಳ ಪ್ರತಿ ನೀಡುವುದು; ಈ ಬಗ್ಗೆ ಸ್ಥಳ ತನಿಖೆ ನಡೆಸಲಾಗಿದೆಯೇ; ಹಾಗಿದ್ದಲ್ಲಿ, ವರದಿ ನೀಡುವುದು; | ಹೌದು.<br><br>ಶ್ರೀ ರಂಗನಾಥ್ ರವರಿಗೆ ಮಂಜೂರಾಗಿದ್ದ ಹತ್ತು ಗುಂಟೆ ಜಮೀನಿನ ಪೈಕಿ ಶ್ರೀ ಚನ್ನಪ್ಪ ಬಿನ್ ಸೋಸಿಮಾದಯ್ಯ ಎಂಬುವವರಿಗೆ ಮಂಜೂರು ಮಾಡಿದ್ದ ನಾಲ್ಕು ಗುಂಟೆ ಜಮೀನಿನ ಮಂಜೂರಾತಿಯನ್ನು ವಿವಿಧ ನ್ಯಾಯಾಲಯಗಳ ಆದೇಶದಂತೆ ರದ್ದು ಮಾಡಲಾಗಿರುತ್ತದೆ. (ಆದೇಶದ ಪ್ರತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ) |
| (ಉ) | ರದ್ದಾದ ಅಲ್ಪ ಭಾಗದ ಜಮೀನನ್ನು ಪುನ: ಜಿಲ್ಲಾಧಿಕಾರಿಯವರು | ಹೌದು.<br>ಆದೇಶದ ಪ್ರತಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. |

| | | |
|---|---|---|
| | ಮೊದಲನೆಯ ಫಲಾನುಭವಿಗೆ ಪುನರ್ ಸ್ಥಾಪಿಸಿ ಮಂಜೂರಾತಿ ನೀಡಿರುವುದು ನಿಜವೇ: (ಆದೇಶದ ಪ್ರತಿ ನೀಡುವುದು) | |
| (ಊ) | ಮಂಜೂರಾದ ಜಮೀನಿನಲ್ಲಿ ಕೆಲವು ಅಧಿಕಾರಿ/ನೌಕರರು ಶಾಮೀಲಾಗಿ ಅಲ್ಪಭಾಗದ ಜಮೀನನ್ನು ಬೇರೆಯವರಿಗೆ ಮಂಜೂರು ಮಾಡಿದ್ದು, ಇವರುಗಳ ವಿರುದ್ಧ ಕೈಗೊಳ್ಳುವ ಕ್ರಮಗಳೇನು; ಮತ್ತು ಸಂಬಂಧಪಟ್ಟ ಬಡ ರೈತನಿಗೆ ಮಂಜೂರಾದ ಪೂರ್ಣ ಜಮೀನು ನೀಡುವ ಬಗ್ಗೆ ತೆಗೆದುಕೊಳ್ಳುವ ಕ್ರಮಗಳೇನು? | ಶ್ರೀ ರಂಗನಾಥ ರವರಿಗೆ ಮಂಜೂರಾದ ಹತ್ತು ಗುಂಟೆ ಜಮೀನಿನ ಪೈಕಿ ಶ್ರೀ ಚನ್ನಪ್ಪ ಬಿನ್ ಸೋಸಿಮಾದಯ್ಯ ರವರಿಗೆ ನಾಲ್ಕು ಗುಂಟೆ ಜಮೀನು ಮಂಜೂರು ಮಾಡಿರುವ ಪ್ರಕರಣವು 33 ವರ್ಷಗಳ ಹಿಂದಿನ ಪ್ರಕರಣವಾಗಿದ್ದು, ಆಗ ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿ/ನೌಕರರ ವಿರುದ್ಧ ಕ್ರಮಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ.<br><br>ಮೊದಲನೆಯ ಫಲಾನುಭವಿಯಾದ ಶ್ರೀ ರಂಗನಾಥ್ ರವರಿಂದ ಕ್ರಯಕ್ಕೆ ಪಡೆದ ಶ್ರೀ ಎಸ್.ಟಿ. ಚಂದ್ರು ಬಿನ್ ತಿರುಮಲಯ್ಯ ಎಂಬುವವರ ಹೆಸರಿಗೆ 0-03.04 ಗುಂಟೆ ಮತ್ತು 0-06.12 ಗುಂಟೆ ಎಂದು ಎರಡು ಬಾರಿ ಕ್ರಯದ ವಹಿವಾಟು ನಡೆದು ಪ್ರಸ್ತುತ ಪಹಣಿಯು ಚಾಲ್ತಿಯಲ್ಲಿರುತ್ತದೆ. ಆದುದರಿಂದ ಯಾವುದೇ ಕ್ರಮವಹಿಸುವ ಅವಶ್ಯಕತೆ ಇರುವುದಿಲ್ಲ. |

(ಕಡತ ಸಂಖ್ಯೆ:ಕಂಇ 16 ಎಲ್‌ಜಿಮ್ಮೆ 2023)

(ಆರ್.ಅಶೋಕ)
ಕಂದಾಯ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 7230 ಅನುಬಂಧ-1

ಉಪವಿಭಾಗಾಧಿಕಾರಿಯವರ ನ್ಯಾಯಾಲಯ, ಮಂಡ್ಯ ಉಪ ವಿಭಾಗ, ಮಂಡ್ಯ
ಪ್ರಕರಣ ಸಂ.ಆರ್‌ಎ 11/00-01
ಉಪಸ್ಥಿತರು : ಟಿ.ಶಾಮಯ್ಯ, ಕೆಎಎಸ್.
ಉಪವಿಭಾಗಾಧಿಕಾರಿ, ಮಂಡ್ಯ ಉಪ ವಿಭಾಗ, ಮಂಡ್ಯ.

ಮೇಲ್ಮನವಿದಾರರು
ಎಸ್.ಟಿ. ಚಂದ್ರ ಬಿನ್ ಎಸ್.ಟಿ.ತಿರುಮಲಯ್ಯ,
ಶಿವಪುರ, ಮದ್ದೂರು.

ಎದುರುದಾರರು
1. ತಹಸೀಲ್ದಾರ್ ಮದ್ದೂರು.
2. ಚನ್ನಪ್ಪ ಬಿನ್ ಸೋಸಿ ಮಾದಯ್ಯ,
ಮದ್ದೂರು ಟೌನ್.

ಪ್ರಕರಣ ಸಂ.ಆರ್‌ಮಿಸ್.36/00-01

ಚನ್ನಪ್ಪ ಬಿನ್ ಸೋಸಿಗೌಡರ ಮಾದಯ್ಯ,
ಕೆಮ್ಮಣ್ಣುನಾಲೆ ಎಂ.ಸಿ.ರಸ್ತೆ,
ಮದ್ದೂರು.

1. ಆರ್.ಅಮರನಾಥ್ ಬಿನ್ ಲೇ
ಡಾ.ಎಸ್.ಆರ್.ರಂಗನಾಥ್
ಮದ್ದೂರು.
2. ಎಸ್.ಟಿ.ಚಂದ್ರ ಬಿನ್ ಎಸ್.ಟಿ.
ತಿರುಮಲಯ್ಯ, ಶಿವಪುರ,
ಮದ್ದೂರು ತಾಲ್ಲೂಕು.
3. ತಹಸೀಲ್ದಾರ್, ಮದ್ದೂರು.

ಆ ದೇ ಶ

ಮದ್ದೂರು ತಾ॥ ಕಸಬಾ ಹೋ॥ ಮದ್ದೂರು ಗ್ರಾಮದ ಸ.ನಂ.51 ರಲ್ಲಿ 0.04 ಗುಂಟೆ ಜಮೀನನ್ನು ಮದ್ದೂರು ತಹಸೀಲ್ದಾರ್ ರವರು ದಿನಾಂಕ 24.7.89ರಂದು ಎಲ್‌ಎನ್ ಡಿ ಸಿಆರ್79/88-89 ರನ್ವಯ 2ನೇ ಎದುರುದಾರರಿಗೆ (ಆರ್‌ಎ 11/00-01) ಮಂಜೂರುಮಾಡಿರುವುದರ ಕ್ರಮಬದ್ಧತೆ ವಿಚಾರ ಹಾಗೂ ಅದೇರೀತಿ ಮದ್ದೂರು ಗ್ರಾಮದ ಸ.ನಂ.51 ರಲ್ಲಿ 0.07 ಗುಂಟೆ ಜಮೀನಿನ ಖಾತೆಯನ್ನು ಮದ್ದೂರು ತಹಸೀಲ್ದಾರ್ ರವರು ದಿನಾಂಕ 14.12.99 ರಂದು ನಂ.ಆರ್‌ಆರ್ ಸಿಆರ್ 834/99-00 ರನ್ವಯ 2ನೇ ಎದುರುದಾರರ ಹೆಸರಿಗೆ (ಆರ್ ಮಿಸ್ 36/00-01)ಬದಲಾಯಿಸಲು ಆದೇಶಿಸಿರುವುದರ ಕ್ರಮಬದ್ಧತೆ ವಿಚಾರದಲ್ಲಿ ಅಪೀಲುದಾರರು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಸೆಕ್ಷನ್ 49 ಮತ್ತು 136(2)ರಡಿಯಲ್ಲಿ ಪ್ರತ್ಯೇಕ ಮೇಲ್ಮನವಿಗಳನ್ನು ಸಲ್ಲಿಸಿರುತ್ತಾರೆ.

ಈ ಎರಡೂ ಮೇಲ್ಮನವಿಗಳನ್ನು ಪ್ರತ್ಯೇಕವಾಗಿ ವಿಚಾರಣೆಗೆ ದಾಖಲಿಸಿಕೊಂಡು ಉಭಯತ್ರರಿಗೂ ವಿಚಾರಣೆಗೆ ಹಾಜರಾಗಲು ನೋಟೀಸುಕೊಟ್ಟು ತಹಸೀಲ್ದಾರಿಂದ ಸಂಬಂಧಿತ ಕಡತಗಳನ್ನು ಪಡೆದು ಒಟ್ಟಿಗೆ ವಿಚಾರಣೆ ನಡೆಸಿದೆ. ಉಭಯ ಪಾರ್ಟಿಗಳ ಪರ ವಕೀಲರು ವಿಚಾರಣೆಗೆ ಹಾಜರಾಗಿದ್ದು ವಾದ ಮತ್ತು ಪ್ರತಿವಾದಿಗಳಾದ

Scanned by CamScanner

ಎಸ್.ಟಿ.ಚಂದ್ರ ಬಿನ್ ಎಸ್.ಟಿ. ತಿರುಮಲಯ್ಯನವರ ಪರ ವಕೀಲರು ವಾದ ಮಂಡಿಸಿದ್ದು ಚನ್ನಪ್ಪ ಬಿನ್ ಸೋಸಿ ಮಲ್ಲಯ್ಯರವರ ಪರ ವಕೀಲರು ಎರಡೂ ಪ್ರಕರಣಗಳಲ್ಲೂ ತಮ್ಮ ಲಿಖಿತವಾದ ಸಲ್ಲಿಸಿರುತಾರೆ.

ವಾದ, ಲಿಖಿತವಾದ, ಉಭಯತ್ರರೂ ಸಲ್ಲಿಸಿರುವ ದಾಖಲಾತಿಗಳೊಂದಿಗೆ ಸಂಬಂಧಿತ ಕಡತಗಳನ್ನು ಪರಿಶೀಲಿಸಲಾಗಿ

1. ಮದ್ದೂರು ಗ್ರಾಮದ ಸ.ನಂ.51 ರಲ್ಲಿ 0.10 ಗುಂಟೆಯು ಮೂಲತಃ ಶ್ರೀ ರಂಗನಾಥ್ ಎಂಬುವರಿಗೆ ಮಂಡ್ಯ ವಿಶೇಷ ಜಿಲ್ಲಾಧಿಕಾರಿಗಳ ಆದೇಶ ಎಲ್‌ಎನ್ ಡಿ(1)ಸಿಆರ್ 436/66-67 ದಿನಾಂಕ 13.12.66ರಲ್ಲಿ ಮೊದಲು ಮಂಜೂರಾಗಿರುತ್ತದೆ.
2. ಅದೇರೀತಿ ಶ್ರೀ ಚನ್ನಪ್ಪ ಬಿನ್ ಸೋಸಿಮಾದಯ್ಯ ಎಂಬುವರಿಗೆ (ಆರ್‌ಎ 11/00-01 ರಲ್ಲಿನ 2ನೇ ಎದುರುದಾರರು ಹಾಗೂ ಆರ್.ಮಿಸ್ 36/00-01 ರಲ್ಲಿನ ಅಪೀಲುದಾರರು) ಉಪ ವಿಭಾಗಾಧಿಕಾರಿಗಳ ಆದೇಶ ಎಲ್‌ಎನ್ ಡಿ(2)ಸಿಆರ್ 10/72-73 ದಿನಾಂಕ 30.4.73ರಲ್ಲಿ ಸ.ನಂ.51 ರಲ್ಲಿ 0.03 ಗುಂಟೆ ಜಮೀನು ಮಂಜೂರಾಗಿರುತ್ತದೆ.
3. ಶ್ರೀ ಚನ್ನಪ್ಪನವರು ಡಾ॥ ರಂಗನಾಥರವರಿಗೆ ಮಂಜೂರಾದ ಜಮೀನಿನ ಮಂಜೂರಾತಿಯನ್ನು ಮೈಸೂರು ವಿಭಾಗಾಧಿಕಾರಿಯವರ ಮುಂದೆ ಪ್ರಶ್ನಿಸಿದ್ದು ದಿನಾಂಕ 21.7.70ರಂದು ನಂ.ಆರ್‌ಎ 2/70-71 ರನ್ವಯ ಅಪೀಲು ವಜಾಮಾಡಿ ಈ ಸ.ನಂ.ನಲ್ಲಿ ಉಳಿದಿರಬಹುದಾದ ಜಮೀನನ್ನು ಮಂಜೂರುಮಾಡುವ ವಿಚಾರದಲ್ಲಿ ಪರಿಶೀಲಿಸುವಂತೆ ಆದೇಶಿಸಿರುವುದು ಕಂಡುಬಂದಿರುತ್ತದೆ.
4. ಇದೇ ಮಂಜೂರಾತಿಯನ್ನು ಪ್ರಶ್ನಿಸಿ ಶ್ರೀ ಚನ್ನಪ್ಪನವರು ಮತ್ತೆ ಕೆ.ಎ.ಟಿ ಯಲ್ಲಿ ಅಪೀಲುಸಲ್ಲಿಸಿದ್ದು ದಿನಾಂಕ 21.1.88 ರಂದು ನಂ.ಅಪೀಲು 784/76 ರನ್ವಯ ಮಾನ್ಯ ಕೆಎಟಿಯು ವಿಶೇಷ ಜಿಲ್ಲಾಧಿಕಾರಿಗಳ ಮಂಜೂರಾತಿ ಆದೇಶವನ್ನೇ ಎತ್ತಿಹಿಡಿದು ಅಪೀಲು ವಜಾಮಾಡಿರುತ್ತದೆ. ಈ ಆದೇಶ ಪ್ರಶ್ನಿಸಿ ಬೇರೆಲ್ಲೂ ಅಪೀಲು ಸಲ್ಲಿಸಿರುವುದು ಕಂಡುಬಂದಿಲ್ಲ.
5. ಡಾ॥ ರಂಗನಾಥ್ ಎಂಬುವರಿಗೆ ಈಗಾಗಲೇ 1966 ರಲ್ಲಿ ಮಂಜೂರಾದ ಜಮೀನನ್ನು ಶ್ರೀ ಎಸ್.ಟಿ. ಚಂದ್ರ ಬಿನ್ ಎಸ್.ಟಿ. ತಿರುಮಲಯ್ಯ (ಆರ್‌ಎ 11/00-01 ರಲ್ಲಿನ ಅಪೀಲುದಾರರು ಹಾಗೂ ಆರ್.ಮಿಸ್ 36/00-01 ರಲ್ಲಿನ 2ನೇ ಎದುರುದಾರರು) ರವರು ದಿನಾಂಕ 23.7.99 ಮತ್ತು 29.11.99 ರಂದು 0.6¾ ಮತ್ತು 0.03¼ ಗುಂಟೆಯಂತೆ 2 ಬಾರಿ ಖರೀದಿಸಿರುತ್ತಾರೆ.
6. ಶ್ರೀ ಚನ್ನಪ್ಪನವರು ಹಿಂದೆ ಈ ಎಲ್ಲಾ ನಡವಳಿಕೆಗಳನ್ನು ಮರೆಮಾಚಿ ಪುನಃ ಹಾಲಿ ಶ್ರೀ ಎಸ್.ಟಿ.ಚಂದ್ರ ರವರು ಪ್ರಶ್ನಿಸಿರುವ ಮಂಜೂರಾತಿಯಂತೆ ಮತ್ತೆ 0.04 ಗುಂಟೆಯನ್ನು ಉತ್ತಮ ಬೇಸಾಯಕ್ಕೆಂದು ಮಂಜೂರು ಮಾಡಿಸಿಕೊಂಡಿರುವುದರಿಂದಲೇ ಪ್ರಕರಣವು ಉದ್ಭವವಾಗಲು ಕಾರಣವಾಗಿರುತ್ತದೆ.
7. ಡಾ॥ ರಂಗನಾಥರಿಗೆ ಈಗಾಗಲೇ ಮಂಜೂರಾಗಿರುವ ಸೈಟ್ ಹಾಗೂ ಶ್ರೀ ಚನ್ನಪ್ಪನವರಿಗೆ ಈಗ ಮಂಜೂರಾಗಿರುವ (ಪ್ರಶ್ನಿತ ಆದೇಶ) ಸೈಟ್ ಮೇರೆಗೆ ತಕರಾರುಉದ್ಭವವಾಗಿ ಡಿಡಿಎಲ್‌ಆರ್ ರವರಲ್ಲಿ ವಿಚಾರಣೆ ನಡೆದು ಚನ್ನಪ್ಪನವರುಹಾಲಿ ಮಂಜೂರುಮಾಡಿಸಿಕೊಂಡಿರುವ 0.04 ಗುಂಟೆ ಜಮೀನು ಈಗಾಗಲೇ ಡಾ॥ ರಂಗನಾಥರಿಗೆ ಮಂಜೂರುಮಾಡಿರುವ ಜಮೀನಿನೊಳಗೆ ಸೇರಿರುತ್ತದೆಂದು ಅಂದರೆ

Scanned by CamScanner

ಮ್ಮ ಓವರ್ ಲ್ಯಾಪ್ ಆಗದೆಯೆಂದು ಅಭಿಪ್ರಾಯಪಟ್ಟಿದ್ದು ಈಗಾಗಲೇ ಕ್ರಯವಾಗಿರುವ (ಎಸ್.ಟಿ.ಚಂದ್ರ) 0.10 ಗುಂಟೆ ಜಮೀನು ಹೊರತುಪಡಿಸಿ 0.04 ಗುಂಟೆ ಜಮೀನು ಲಭ್ಯವಿದ್ದಲ್ಲಿ ಜಮೀನಿನ ದುರಸ್ತಿ ಕಾರ್ಯ ಪೂರೈಸಲು ಆದೇಶಿಸಿರುವುದು ಕಂಡುಬಂದಿರುತ್ತದೆ.

8. ತಹಶೀಲ್ದಾರ್ ರವರ ಅಪೀಲು 35/00-01 ದಿನಾಂಕ 19-11-01ರ ಆದೇಶ ಪ್ರಶ್ನಿಸಿ ಶ್ರೀ ಚನ್ನಪ್ಪನವರು ಕೆಎಟಿ ಯಲ್ಲಿ 845/01 ರಂತೆ ಮೇಲ್ಮನವಿ ದಾಖಲಿಸಿರುವುದು ಕಂಡುಬಂದಿರುತ್ತದೆ.

9. ಶ್ರೀ ಚನ್ನಪ್ಪನವರಿಗೆ 0.04 ಗುಂಟೆ ಜಮೀನು ಮಂಜೂರುಮಾಡುವ ಮೊದಲು ಈ ಜಮೀನು ರಾಷ್ಟ್ರೀಯ ಹೆದ್ದಾರಿಯಿಂದ ಕೇವಲ 80 ಅಡಿ ದೂರದಲ್ಲಿರುವುದೆಂದು ತಹಶೀಲ್ದಾರ್ ರವರು ಸ್ಥಳ ತನಿಖೆ ವರದಿಯಲ್ಲಿ ಪ್ರಸ್ತಾಪಿಸಿರುತ್ತಾರೆ. ಅಲ್ಲದೆ ಗ್ರಾಮಸ್ಥರ ಮಹಜರ್ ನಲ್ಲೂ ಕೂಡ ಈ ಅಂಶವನ್ನು ಪ್ರಸ್ತಾಪಿಸಿದ್ದು ಆದರೆ ಲೋಕೋಪಯೋಗಿ ಇಲಾಖೆಯಿಂದ ಅಭಿಪ್ರಾಯ ಪಡೆದು ನಂತರ ಮಂಜೂರುಮಾಡಿರುವ ಬಗ್ಗೆ ಯಾವುದೇ ದಾಖಲೆಯು ಇರುವುದಿಲ್ಲ.

10. ಶ್ರೀ ಚನ್ನಪ್ಪನವರು ಎಸ್.ಟಿ.ಚಂದ್ರ ಮತ್ತಿತರರ ವಿರುದ್ಧ ಸಿವಿಲ್ ನ್ಯಾಯಾಲಯ (ಹಿರಿಯ ವಿಭಾಗ) ಮಂಡ್ಯದಿಂದ ಓ.ಎಸ್.424/00 ರಂತೆ ದಾವೆ ಹೂಡಿ ಉಭಯತ್ರರೂ ಪ್ರಕರಣ ಇತ್ಯರ್ಥವಾಗುವವರೆಗೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಮಧ್ಯಂತರ ಆದೇಶ ಪಡೆದಿರುವುದು ಕಂಡುಬಂದಿರುತ್ತದೆ.

11. ಪ್ರಸ್ತುತ ಮೇಲ್ಮನವಿಯು (ಆರ್ಎ 11/00-01) 0.04 ಗುಂಟೆ ಜಮೀನಿನ ಮಂಜೂರಾತಿಯ ವಿಚಾರದಲ್ಲಿ ಮಾತ್ರ ಇದ್ದು ಈ ಜಮೀನನ್ನು ಶ್ರೀ ಚನ್ನಪ್ಪನವರಿಗೆ ಮಂಜೂರುಮಾಡುವ ಮೊದಲು ಭೂಮಂಜೂರಾತಿ ನಿಯಮಗಳನ್ನು ಪಾಲಿಸಿ ನಿಯಮಾನುಸಾರ ಮಂಜೂರುಮಾಡಿದೆಯೇ ಎಂಬುದೇ ಮುಖ್ಯವಾದ ಅಂಶವಾಗಿರುತ್ತದೆ.

12. ಆರ್.ಎಮ್.ಎಸ್ 36/00-01ರ ಪ್ರಕರಣದ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಎಸ್.ಟಿ.ಚಂದ್ರರವರು ಡಾ. ರಂಗನಾಥರವರಿಂದ ಪೂರ್ತಾ 0.10 ಗುಂಟೆ ಕ್ರಯಕ್ಕೆ ಪಡೆದಿದ್ದು ಕ್ರಯದ ನಂತರ ಉಪನೋಂದಣಾಧಿಕಾರಿಗಳಿಂದ ಜೆ ನಮೂನೆ ಮೇರೆಗೆ ಇವರ ಹೆಸರಿಗೆ ಖಾತೆ ಅಂಗೀಕರಿಸುವಾಗ ಶ್ರೀ ಚನ್ನಪ್ಪನವರು ಖಾತೆ ಮಾಡದಂತೆ ತಕರಾರು ಎತ್ತಿದ್ದು ಆಗ ಈ ಪ್ರಕರಣವನ್ನು ವಿವಾದಾತ್ಮಕ ಪ್ರಕರಣವೆಂದು ದಾಖಲು ಮಾಡಿಕೊಂಡು ಉಭಯತ್ರರಿಗೂ ವಿಚಾರಣೆಗೆ ನೋಟೀಸುಕೊಟ್ಟು ನಿಯಮಾನುಸಾರ ವಿಚಾರಣೆ ನಡೆಸಿ ದಾಖಲಾತಿಗಳ ಪರಿಶೀಲನೆ ಮೇರೆಗೆ ಜೆ ನಮೂನೆ ಆಧಾರದಂತೆ ಖಾತೆ ಅಂಗೀಕರಿಸಲು ಆದೇಶಿಸಿರುವುದು ಕಂಡುಬಂದಿದ್ದು ಇದರಲ್ಲಿ ಯಾವುದೇ ಲೋಪದೋಷವು ಇರುವುದಿಲ್ಲ. ಶ್ರೀ ಚನ್ನಪ್ಪನವರ ಮಂಜೂರಾತಿಯನ್ನು ಪ್ರಶ್ನಿಸಿ ಶ್ರೀ ಎಸ್.ಟಿ.ಚಂದ್ರರವರು ಅಪೀಲು ಸಲ್ಲಿಸಿದಾಗ (ಆರ್.ಎ.11/00-01) ಬೇಕಂತಲೇ ಪ್ರತಿಯಾಗಿ ಶ್ರೀ ಚನ್ನಪ್ಪನವರು ಶ್ರೀ ಎಸ್.ಟಿ.ಚಂದ್ರರವರ ಕ್ರಯದಂತೆ ಖಾತೆ ಅಂಗೀಕರಿಸುವ ವಿಚಾರದಲ್ಲಿ ಮತ್ತೊಂದು ಪ್ರತಿದಾವೆ ಹೂಡಿರುವುದು ಕಂಡುಬಂದಿರುತ್ತದೆ (ಆರ್ ಎಮ್ಎಸ್ 36/00-01).

13. ಈಗಾಗಲೇ ವಿವಾದಿತ ಜಮೀನಿನ ಸ್ವಾಧೀನತೆಯ ವಿಚಾರದಲ್ಲಿ ಸಿವಿಲ್ ದಾವೆ ಹಾಗೂ ಖಾತೆ ವಿಚಾರದಲ್ಲಿ ಕೆಎಟಿ ಯಲ್ಲಿ ಪ್ರಕರಣ ದಾಖಲಾಗಿ ವಿಚಾರಣೆನಡೆಯುತ್ತಿದ್ದರೂ ಕೂಡ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಸೆಕ್ಷನ್ 61, 62 ಮತ್ತು 63ರ ರನ್ವಯ ಮಂಜೂರಾತಿಯ ಕ್ರಮಬದ್ಧತೆಯ ವಿಚಾರದಲ್ಲಿ ಪರಿಶೀಲಿಸಿ ವಿಚಾರಣೆನಡೆಸಿ ತೀರ್ಮಾನಿಸುವ ಅಧಿಕಾರ ಕಂದಾಯ ನ್ಯಾಯಾಲಯಗಳಿಗೆ ಇರುವುದರಿಂದ ಈ ಮೇಲೆ ಚರ್ಚಿಸಲಾದ ಅಂಶಗಳ ಆಧಾರದ ಮೇರೆಗೆ ಡಾ. ರಂಗನಾಥರವರಿಗೆ 1966

Scanned by CamScanner

ರಲ್ಲಿಯೇ ಮಂಜೂರಾಗಿ ಈ ಮಂಜೂರಾತಿಯು ಸಿಂಧುವೆಂದು ಈಗಾಗಲೇ ಮೇಲಿನ ಎಲ್ಲಾ ನ್ಯಾಯಾಲಯಗಳಲ್ಲೂ ತೀರ್ಮಾನವಾಗಿದ್ದು ಇದೇ ಜಮೀನಿಗೆ ಸೇರಿದಂತೆ ಮಾಡಲಾಗಿರುವ 0.04 ಗುಂಟೆ ಮಂಜೂರಾತಿಯು (ಆರ್‌ಎ 11/00-01ರಲ್ಲಿ ಪ್ರಶ್ನಿತ ಆದೇಶ) ಕ್ರಮಬದ್ಧವಲ್ಲವೆಂದು ಅಭಿಪ್ರಾಯಪಡುತ್ತೇನೆ. ಹಾಗೆಯೇ 1966ರಲ್ಲಿ ಮೊದಲು ಮಂಜೂರಾದ ಜಮೀನನ್ನು ಎಸ್.ಟಿ. ಚಂದ್ರರವರು ಕ್ರಯಕ್ಕೆ ಪಡೆದಿರುವುದರಿಂದ ಕ್ರಯದಂತೆ ಖಾತೆ ಅಂಗೀಕರಿಸುವಂತೆ ತಹಸೀಲ್ದಾರರು ಮಾಡಿರುವ ಖಾತಾ ಆದೇಶವು (ಆರ್.ಮಿಸ್. 36/00-01) ಕ್ರಮಬದ್ಧವೆಂದು ಪರಿಗಣಿಸಿದೆ. ಅಂತೆಯೇ ಪ್ರಕರಣ ಆರ್‌ಎ 11/00-01ರ ಪ್ರಕರಣದಲ್ಲಿ ಪ್ರಶ್ನಿಸಿರುವ ಮಂಜೂರಾತಿಯು ಕ್ರಮಬದ್ಧವಲ್ಲವೆಂದು ರದ್ದುಪಡಿಸಿ, ಮೇಲ್ಮನವಿ ಪುರಸ್ಕರಿಸಿದೆ. ಹಾಗೆಯೇ ಆರ್.ಮಿಸ್. 36/00-01ರ ಪ್ರಕರಣದಲ್ಲಿನ ತಹಸೀಲ್ದಾರ್ ರವರ ಖಾತಾ ಆದೇಶ ಕ್ರಮಬದ್ಧವೆಂದು ಪರಿಗಣಿಸಿ ಸದರಿ ಮೇಲ್ಮನವಿಯನ್ನು ತಿರಸ್ಕರಿಸಿ ಆದೇಶಿಸಿದ್ದೇನೆ.

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಗಣಕೀಕರಿಸಿ ಓದಿ ತಿದ್ದಿ ದಿನಾಂಕ 28.5.02 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದ್ದೇನೆ.

ಸಹಿ/-
ಉಪ ವಿಭಾಗಾಧಿಕಾರಿ,
ಮಂಡ್ಯ.

ಪ್ರತಿ : ತಹಸೀಲ್ದಾರ್ ಮದ್ದೂರು ಇವರಿಗೆ ಕಡತ ಸಂ.ಎಲ್‌ಆರ್ ಪಿ 5/90-91, 79/88-89, 135/89-90 ದಿನಾಂಕ 22.9.00(ಪುಟ 1 ರಿಂದ 27) ಮತ್ತು ಕಡತ ಸಂ.ಆರ್‌ಆರ್ ಸಿಆರ್ 1421/99-00 ದಿನಾಂಕ 8.1.00 ರೊಂದಿಗೆ (ಪುಟ 1 ರಿಂದ 18) ಮಾಹಿತಿಗೆ ಹಾಗೂ ಅಗತ್ಯ ಕ್ರಮಕ್ಕೆ ಕಳುಹಿಸಿದೆ.

ಸಹಿ/-
ಉಪ ವಿಭಾಗಾಧಿಕಾರಿ,
ಮಂಡ್ಯ.

ಆ.ಎ. 11/00-01
36/-
[illegible] ದಿನಾಂಕ
[illegible] ದಿನಾಂಕ 19.6.02
[illegible] ದಿನಾಂಕ
[illegible]
[illegible]
[illegible]

"ನಿಜ ನಕಲು"

ಸಹಿ
ಉಪ ವಿಭಾಗಾಧಿಕಾರಿ,
ಮಂಡ್ಯ ಉಪವಿಭಾಗ, ಮಂಡ್ಯ.
19/6/02

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೩೨೩೮ ಅನುಬಂಧ-೨

**ಜಿಲ್ಲಾಧಿಕಾರಿಯವರ ನ್ಯಾಯಾಲಯ, ಮಂಡ್ಯ ಜಿಲ್ಲೆ,ಮಂಡ್ಯ**

**ಪ್ರಕರಣ ಸಂಖ್ಯೆ: ಆರ್.ಎ. ೦೨/೨೦೧೨**

**ಉಪಸ್ಥಿತರು : ಶ್ರೀ ಬಿ.ಎನ್. ಕೃಷ್ಣಯ್ಯ, ಭಾ.ಆ.ಸೇ.,**

**ಜಿಲ್ಲಾಧಿಕಾರಿ,**

**ಮಂಡ್ಯ ಜಿಲ್ಲೆ, ಮಂಡ್ಯ.**

| ಅಪೀಲುದಾರರು | ವಿರುದ್ಧ | ಎದುರುದಾರರು |
|---|---|---|
| ಚನ್ನಪ್ಪ ಬಿನ್<br>ಲೇಟ್ ಮಾದಯ್ಯ,<br>ಅರಳಿಮರದ ಹತ್ತಿರ<br>ಮದ್ದೂರು ಟೌನ್ | 1. | ತಹಸೀಲ್ದಾರ್,<br>ಮದ್ದೂರು ತಾಲ್ಲೂಕು. |
| | 2. | ಉಪವಿಭಾಗಾಧಿಕಾರಿ,<br>ಮಂಡ್ಯ ಉಪವಿಭಾಗ,<br>ಮಂಡ್ಯ |
| | 3. | ಸಿ.ಟಿ.ಚಂದ್ರ ಬಿನ್<br>ಎಸ್.ಟಿ.ತಿರುಮಲಯ್ಯ,<br>ಶಿವಪುರ, ಕಸಬಾ ಹೋಬಳಿ,<br>ಮದ್ದೂರು ಟೌನ್. |
| | 4. | ಅಮರನಾಥ್ ಬಿನ್<br>ಲೇಟ್ ಡಾ:ರಂಗನಾಥ್,<br>ಲೀಲಾವತಿ ಬಡಾವಣೆ,<br>ಮದ್ದೂರು ಟೌನ್. |

ಪ್ರಕರಣದ ವಿದ್ಯಮಾನಗಳು:-

ಮದ್ದೂರು ತಾಲ್ಲೂಕು, ಮದ್ದೂರು ಗ್ರಾಮದ ಸರ್ವೆ ನಂಬರ್ 51 ರಲ್ಲಿ 0.04 ಗುಂಟೆ ಜಮೀನಿನ ಮಂಜೂರಾತಿ ರದ್ದುಪಡಿಸಿರುವುದರ ಕ್ರಮಬದ್ಧತೆಯನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಸೆಕ್ಷನ್ 50 ರಡಿಯಲ್ಲಿ ಉಪವಿಭಾಗಾಧಿಕಾರಿ ಮಂಡ್ಯ ರವರ ಪ್ರಕರಣ ಸಂಖ್ಯೆ ಆರ್.ಎ.2/08-09 ದಿನಾಂಕ 15-11-2011 ರ ಆದೇಶದ ಮೇರೆಗೆ ಮೇಲ್ಮನವಿ ಸಲ್ಲಿಸಲಾಗಿದೆ.

ಮೇಲ್ಮನವಿಯನ್ನು ವಿಚಾರಣೆಗೆ ದಾಖಲು ಮಾಡಿಕೊಂಡು ಪ್ರಶ್ನಿತ ಆದೇಶದ ಸಂಬಂಧ ಅಪೀಲುದಾರರನ್ನು ಸದರಿ ಜಮೀನಿನಿಂದ ಖುಲ್ಲಾಪಡಿಸುವ ವಿಚಾರದಲ್ಲಿ ತಾತ್ಕಾಲಿಕವಾಗಿ ನಿರ್ಬಂಧಿಸಿ ಉಭಯತ್ರರೂ ವಿಚಾರಣೆಗೆ ಹಾಜರಾಗಲು ನೋಟೀಸು ಕೊಟ್ಟು ಉಪವಿಭಾಗಾಧಿಕಾರಿ

ಮಂಡ್ಯರವರಿಂದ ಸಂಬಂಧಿತ ಕಡತ ಪಡೆದು ವಿಚಾರಣೆ ನಡೆಸಿದೆ. ಉಭಯತ್ರರ ವಕೀಲರು ವಿಚಾರಣೆಗೆ ಹಾಜರಾಗಿ ವಾದ ಮಂಡಿಸಿ ಲಿಖಿತವಾದನ್ನು ಸಹಾ ಸಲ್ಲಿಸಿರುತ್ತಾರೆ.

ಮೇಲ್ಮನವಿದಾರರ ಪರ ವಕೀಲರ ವಾದ ಹಾಗೂ ಲಿಖಿತವಾದದಲ್ಲಿನಂತೆ ಮದ್ದೂರು ಸರ್ವೆ ನಂಬರ್ 81 ರಲ್ಲಿ 1.08 ಎಕರೆ ಜಮೀನು ಮೂಲತಃ ಹುಲ್ಲುಬನ್ನಿ ಖರಾಬು ಜಮೀನಾಗಿದೆ. ಇದರಲ್ಲಿ ಈಗಾಗಲೇ ಹಲವಾರು ಮಂದಿಗೆ ಜಮೀನು ಮಂಜೂರ್ಮಾಡಲಾಗಿದೆ. ಅದರಂತೆ ತನಗೂ ಕೂಡ 73-74 ರಲ್ಲಿ 0.03 ಗುಂಟೆ ಜಮೀನು ಮಂಜೂರಾಗಿದ್ದು ಈ ಜಮೀನಿನ ಬಾಜೂಗಾದಂತೆ 0.04 ಗುಂಟೆಯನ್ನು ಅಕ್ರಮ ಸಾಗುವಳಿ ಮಾಡಿಕೊಂಡಿದ್ದು ಉತ್ತಮ ಬೇಸಾಯದಡಿ ಈ 0.04 ಗುಂಟೆ ಜಮೀನು 19-8-89 ರಲ್ಲಿ ತನಗೇ ಮಂಜೂರ್ಮಾಡಲಾಗಿದೆ. ಖಾತೆ ಸಹಾ ಅಂಗೀಕಾರವಾಗಿದೆ. ನಂತರ ಪಕ್ಕ ಪೋಡಿ ಸಹಾ ಆಗಿದೆ. ಅದೇ ರೀತಿ 4 ನೇ ಎದುರುದಾರರ ತಂದೆ ಡಾ:ರಂಗನಾಥ್‌ರವರಿಗೆ 12.12.1966 ರಲ್ಲಿ ಇದೇ ಸರ್ವೆ ನಂಬರ್ ನಲ್ಲಿ 0.10 ಗುಂಟೆ ಜಮೀನು ಮಂಜೂರಾಗಿದೆ. ಆದರೆ ಇವರು ಯಾವುದೇ ದರಖಾಸ್ತು ಅರ್ಜಿ ಸಲ್ಲಿಸಿರುವುದಿಲ್ಲ. 0.04 ಗುಂಟೆ ಜಮೀನು ಈಗಾಗಲೇ ತನಗೆ ಮಂಜೂರಾಗಿರುವ ಬಗ್ಗೆ ನಮೂನೆ -7- ರಲ್ಲಿ ಕೂಡ ಪ್ರಸ್ತಾಪವಾಗಿದೆ. ಡಾ: ರಂಗನಾಥ್‌ರವರಿಗೆ 0.10 ಗುಂಟೆ ಜಮೀನು ಯಾವ ಜಾಗದಲ್ಲಿ ಮಂಜೂರ್ಮಾಡಲಾಗಿದೆ ಎಂಬ ಬಗ್ಗೆ ಸ್ಕೆಚ್ ಇರುವುದಿಲ್ಲ. ಡಾ:ರಂಗನಾಥ್ ರವರಿಗೆ ಮಂಜೂರ್ಮಾಡಿರುವ ಜಮೀನು ತನಗೆ ಮಂಜೂರ್ಮಾಡಿರುವ ಜಮೀನಿಗೆ ಅತಿವ್ಯಾಪ್ತಿವಾಗಿರುತ್ತದೆಯೆಂದು ವ್ಯವಹಾರಿಕ ನ್ಯಾಯಾಲಯವು ತೀರ್ಪಿತ್ತಿದ್ದು ಇದು ಆಧಾರ ರಹಿತವಾದ ಆದೇಶವಾಗಿದೆ. ತನಗೆ ಮಂಜೂರ್ಮಾಡಿರುವ ಜಮೀನಿಗೆ ರಂಗನಾಥ್‌ರವರಿಗೆ ಮಂಜೂರ್ಮಾಡಿರುವ ಜಮೀನು ಅತಿವ್ಯಾಪ್ತಿಯಾಗು ತ್ತಿದೆಯೇ ಹೊರತು ಡಾ:ರಂಗನಾಥ್‌ರವರಿಗೆ ಮಂಜೂರಾದ ಜಮೀನಿಗೆ ತನ್ನ ಮಂಜೂ ರಾತಿಯು ಅತಿವ್ಯಾಪ್ತಿಯಾಗಿರುವುದಿಲ್ಲ. ಪ್ರಧಾನ ಸಿವಿಲ್ ನ್ಯಾಯಾಲಯ ದಲ್ಲಿ ಆರ್.ಎ. 91/2009 ರ ಪ್ರಕರಣ ಇತ್ಯರ್ಥಕ್ಕೆ ಬಾಕಿ ಇರುವುದರಿಂದ ದಿನಾಂಕ 14-08-1989 ರಲ್ಲಿ ಆಗಿರುವ 0.04 ಗುಂಟೆ ಮಂಜೂರಾತಿಯನ್ನು ಖಾಯಂಗೊಳಿಸಿ ಉಪವಿಭಾಗಾಧಿಕಾರಿ ಯವರ

ಹಾಗೂ ತಹಸೀಲ್ದಾರ್‌ರವರ ಮಂಜೂರಾತಿ ರದ್ದತಿ ಆದೇಶವನ್ನು ರದ್ದುಗೊಳಿಸ ಬೇಕೆಂದು ಕೋರಿರುತ್ತಾರೆ.

3 ಮತ್ತು 4 ನೇ ಪ್ರತಿವಾದಿ ವಕೀಲರ ವಾದ ಹಾಗೂ ವಾದದಲ್ಲಿನಂತೆ. ಮೇಲ್ಮನವಿ ಅರ್ಜಿಯಲ್ಲಿನ ಎಲ್ಲಾ ಅಂಶಗಳು ಸತ್ಯಕ್ಕೆ ದೂರವಾದ ಸಂಗತಿಗಳಾಗಿದ್ದು ಡಾ:ರಂಗನಾಥ್‌ರವರಿಗೆ ಈ ಹಿಂದೆ 1968 ರಲ್ಲಿ ಮಂಜೂರಾಗಿದ್ದ 0.10 ಗುಂಟೆ ಜಮೀನಿನ ಮಂಜೂರಾತಿ ವಿಚಾರದಲ್ಲಿ ಈಗಾಗಲೇ ಈ ನ್ಯಾಯಾಲಯವು ಸೇರಿದಂತೆ ಮೇಲಿನ ಎಲ್ಲಾ ನ್ಯಾಯಾಲಯಗಳಲ್ಲೂ ಮೇಲ್ಮನವಿದಾರರ ಕೋರಿಕೆಯನ್ನು ತಿರಸ್ಕರಿಸ ಲಾಗಿದೆ. ಅದೇ ರೀತಿ ಇವರಿಗೆ 0.04 ಗುಂಟೆ ಜಮೀನಿನ ಮಂಜೂರಾತಿ ದುರಸ್ತಿ ವಿಚಾರದಲ್ಲಿ ಕೂಡ ಇವರ ಕೋರಿಕೆಯನ್ನು ಎಲ್ಲಾ ನ್ಯಾಯಾಲಯಗಳು ತಿರಸ್ಕರಿಸಿರುತ್ತವೆ. ಮಂಜೂರಾತಿ ವಿಚಾರದಲ್ಲಿ ಇದು ಅಪೀಲುದಾರರ 3 ನೇ ಸುತ್ತಿನ ಅಪೀಲು ಆಗಿರುತ್ತದೆ. ಇವರು ತಮಗೆ ತೊಂದರೆ ಉಂಟು ಮಾಡುವ ಉದ್ದೇಶದಿಂದಲೇ ಪದೇ ಪದೇ ಎಲ್ಲಾ ವಿಧವಾದ ನ್ಯಾಯಾಲಯಗಳಲ್ಲಿಯೇ ಅಪೀಲು ಸಲ್ಲಿಸುವ ಪ್ರವೃತ್ತಿಯನ್ನು ಹೊಂದಿರುತ್ತಾರೆ. ಮಂಡ್ಯ ಪ್ರಧಾನ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿನ ಆರ್.ಎ 91/2009 ರ ಅಪೀಲು ಕೂಡ ದಿನಾಂಕ 20.06.2013 ರಂದು ವಜಾ ಆಗಿರುತ್ತದೆ. ಆದುದರಿಂದ ಅಪೀಲುದಾರರ 0.04 ಗುಂಟೆ ಜಮೀನಿನ ಮಂಜೂರಾತಿ ರದ್ದತಿ ವಿಚಾರದಲ್ಲಿ ತಹಸೀಲ್ದಾರ್‌ರವರು ಹಾಗೂ ಉಪವಿಭಾಗಾಧಿಕಾರಿಯವರು ತೆಗೆದುಕೊಂಡಿರುವ ತೀರ್ಮಾನ ಕಾನೂನುಬದ್ಧವಾಗಿರುವುದರಿಂದ ಪ್ರಸ್ತುತ ಮೇಲ್ಮನವಿಯನ್ನು ವಜಾ ಗೊಳಿಸ ಬೇಕೆಂದು ಕೋರಿರುವುದಾಗಿರುತ್ತದೆ.

ಉಭಯತ್ರರ ವಕೀಲರ ವಾದ ಲಿಖಿತವಾದ ಸಲ್ಲಿಸಿರುವ ದಾಖಲೆಗಳು ಇವುಗಳೊಂದಿಗೆ ಉಪವಿಭಾಗಾಧಿಕಾರಿಯವರಿಂದ ಪಡೆದ ಕಡತದೊಂದಿಗೆ ಪರಿಶೀಲಿಸಲಾಗಿ,

<u>ಈ ಪ್ರಕರಣದಲ್ಲಿ ಮುಖ್ಯವಾಗಿ ಕೆಳಕಂಡ ಅಂಶಗಳು ಗೋಚರಿಸುತ್ತದೆ.</u>

1. ಈ ನ್ಯಾಯಾಲಯದ ಪ್ರಕರಣ ಸಂಖ್ಯೆ ಆರ್‌ಎ 25/2002 ಮತ್ತು ಆರ್.ಪಿ 131/2002 ದಿನಾಂಕ 27.12.2004 ರ

ಆದೇಶದಲ್ಲಿ ನೀಡಿರುವ ನಿರ್ದೇಶನದಂತೆ ತಹಸೀಲ್ದಾರ್‌ರವರು ಹಾಗೂ ಉಪವಿಭಾಗಾಧಿಕಾರಿಯವರು ಕಾನೂನುಬದ್ಧವಾಗಿ ಕ್ರಮಬದ್ಧವಾಗಿ ಕ್ರಮವಹಿಸಿ ತೀರ್ಮಾನಿಸಿದ್ದಾರೆಯೇ? ಎಂಬುದನ್ನು ಮುಖ್ಯವಾಗಿ ಗಮನಿಸಬೇಕಾದ ಅಂಶವಾಗಿ ರುತ್ತದೆ.

2. ದಿನಾಂಕ 27.12.2004 ರ ಈ ನ್ಯಾಯಾಲಯದ ಅಂತಿಮ ಆದೇಶದಲ್ಲಿ ಕೆಳಕಂಡಂತೆ ಉಪವಿಭಾಗಾಧಿಕಾರಿ ಮಂಡ್ಯರವರಿಗೆ ನಿರ್ದೇಶನ ನೀಡಿರುತ್ತದೆ."ಮಂಡ್ಯ ಉಪವಿಭಾಗಾಧಿಕಾರಿಗಳು ಡಾ:ರಂಗನಾಥ್‌ರವರಿಗೆ 1966 ರಲ್ಲಿ ಮಂಜೂರಾಗಿರುವ ಜಮೀನಿನ ಸ್ಕೆಚ್ ಪಡೆದು ಅತಿವ್ಯಾಪ್ತಿ ಯಾಗಿದೆಯೆ? ಇಲ್ಲವೆ? ಎಂಬ ಬಗ್ಗೆ ಪರಿಶೀಲಿಸಲು ಹಾಗೂ ಪ್ರತಿವಾದಿಗಳು ಡಾ:ರಂಗನಾಥ್‌ರವರಿಂದ ಪಡೆದಿರುವ 0.10 ಗುಂಟೆ ಹೊರತುಪಡಿಸಿ ಜಮೀನು ಲಭ್ಯವಿದ್ದಲ್ಲಿ ಅಪೀಲುದಾರರಿಗೆ ಮಂಜೂರಾಗಿರುವ 0.04 ಗುಂಟೆ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಹಾಗೂ ಅಪೀಲುದಾರರಿಗೆ 0.04 ಗುಂಟೆ ಪ್ರತಿವ್ಯಾಪ್ತಿಯಾಗಿದೆಯೆ? ಇಲ್ಲವೆ? ಎಂಬ ಬಗ್ಗೆ ಅಳತೆ ಮಾಡಿಸಿ ತೀರ್ಮಾನ ತೆಗೆದುಕೊಳ್ಳಲು ಆದೇಶಿಸಿದೆ."

3. ಈ ನ್ಯಾಯಾಲಯದ ದಿನಾಂಕ 27-12-2004 ರ ಆದೇಶದಲ್ಲಿ ಮುಖ್ಯವಾಗಿ 3 ವಿಚಾರಗಳ ಬಗ್ಗೆ ಉಪವಿಭಾಗಾಧಿಕಾರಿ ಮಂಡ್ಯ ರವರಿಗೆ ಸ್ಪಷ್ಟ ನಿರ್ದೇಶನ ನೀಡಿರುತ್ತದೆ.

ಅ) ಡಾ:ರಂಗನಾಥ್‌ರವರಿಗೆ ಮಂಜೂರಾಗಿರುವ 0.10 ಗುಂಟೆ ಜಮೀನಿಗೆ ಸ್ಕೆಚ್ ಪಡೆದು ಆ ಪೈಕಿ ಈ 0.04 ಗುಂಟೆ ಮಂಜೂರಾತಿಯು(ಅಪೀಲುದಾರು) ಅತಿವ್ಯಾಪ್ತಿ ಯಾಗಿದೆಯೆ?

ಆ) ಈ 0.10 ಗುಂಟೆ ಜಮೀನು ಹೊರತುಪಡಿಸಿ 0.04 ಗುಂಟೆ ಜಮೀನು ಲಭ್ಯವಿದ್ದಲ್ಲಿ ಅಪೀಲುದಾರರ ಕೋರಿ ಕೆಯ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು

ಇ) ಅಪೀಲುದಾರರಿಗೆ ಮಂಜೂರಾಗಿರುವ 0.04 ಗುಂಟೆ ಜಮೀನಿಗೆ ಡಾ:ರಂಗನಾಥ್‌ರವರಿಗೆ ಮಂಜೂ ರಾಗಿರುವ ಜಮೀನು ಅತಿವ್ಯಾಪ್ತಿ ಯಾಗಿದೆಯೆ? ಇಲ್ಲವೆ?

ಎಂಬುದನ್ನು ಅಳತೆ ಮಾಡಿಸಿ ಪರಿಶೀಲಿಸಿ ತೀರ್ಮಾನ ತೆಗದುಕೊಳ್ಳುವುದು.

**ವಿವರಣೆ**

3 (ಅ) ಅಪೀಲುದಾರರಿಗೆ ಎಲ್‌ಎನ್‌ಡಿ (2) ಸಿಆರ್ 90/72-73 ದಿನಾಂಕ 30-4-1973 ರಲ್ಲಿ ಸರ್ವೆ ನಂಬರ್ 51 ರಲ್ಲಿ 0.03 ಗುಂಟೆ ಜಮೀನು ಮಂಜೂರಾಗಿದ್ದು ಈ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. ಅದೇ ರೀತಿ ಡಾ॥ರಂಗನಾಥ್‌ರವರಿಗೆ ವಿಶೇಷ ಜಿಲ್ಲಾಧಿಕಾರಿಗಳ ಆದೇಶ ಎಲ್‌ಎನ್‌ಡಿ(1) ಸಿಆರ್436/66-67 ದಿನಾಂಕ 13.12.1966 ರಲ್ಲಿ 0.10 ಗುಂಟೆ ಮಂಜೂರಾಗಿದ್ದು ಈ ಮಂಜೂರಾತಿ ಕ್ರಮಬದ್ಧತೆ ವಿಚಾರದಲ್ಲಿ ಅಪೀಲುದಾರರು ಈವರೆಗೆ ವಿವಿಧ ನ್ಯಾಯಾಲಯಗಳಲ್ಲಿ ಹೂಡಿದ್ದ ದಾವೆಯು ವಜಾ ಆಗಿರುವುದರಿಂದ ಸದರಿ ಮಂಜೂರಾತಿ ಕ್ರಮಬದ್ಧತೆ ಬಗ್ಗೆ ಮತ್ತೆ ಚರ್ಚಿಸುವ ಅವಶ್ಯಕತೆ ಇರುವುದಿಲ್ಲ. ಕೇವಲ ಅತಿ ವ್ಯಾಪ್ತಿ ವಿಚಾರದಲ್ಲಿ ಮಾತ್ರ ಪರಿಶೀಲಿಸಬೇಕಾಗಿರುತ್ತದೆ.

ದಿನಾಂಕ 14.10.2010 ಉಪವಿಭಾಗಾಧಿಕಾರಿ ಮಂಡ್ಯರವರು ಸ್ಥಳ ಪರಶೀಲನೆ ಮಾಡಿದ್ದು ಸರ್ವೆ ನಂಬರ್ 51 ( ಹೊಸ ಸರ್ವೆ ನಂಬರ್ 963) ರ ಒಟ್ಟಾರೆ ಜಮೀನಿನ ಸ್ಕೆಚ್ ತಯಾರಿಸಿ ವರದಿ ಸಲ್ಲಿಸುವಂತೆ ಅಧೀನ ಕಂದಾಯಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದರ ಮೇರೆಗೆ ದಿನಾಂಕ 28.1.2011 ರಂದು ಸ್ಕೆಚ್ ತಯಾರಿಸಲಾಗಿದೆ. ಭೂದಾಖಲೆಗಳ ಸಂಯುಕ್ತ ನಿರ್ದೇಶಕರು ಮೈಸೂರು ರವರ ಆದೇಶ ಅಪೀಲು 35/00-01 ದಿನಾಂಕ 19.11.2001 ರಂತೆ 1966 ರಲ್ಲಿ ಡಾ॥ ರಂಗನಾಥ್‌ರವರಿಗೆ ಮಂಜೂರಾಗಿದ್ದ 0.10 ಗುಂಟೆ ಪ್ರದೇಶದಲ್ಲಿಯೇ ಹಾಲಿ ಅಪೀಲುದಾರರಿಗೆ 0.04 ಗುಂಟೆ ಜಮೀನು ದಿನಾಂಕ 29.07.1989 ರಲ್ಲಿ ಮಂಜೂರಾಗಿರುವ ಜಮೀನಿಗೆ ಅತಿವ್ಯಾಪ್ತಿ ಯಾಗಿರುವುದರಿಂದ ದುರಸ್ತಾಗಿರುವ ಹೊಸ ಸರ್ವೆ ನಂಬರ್ 963 ನ್ನು ರದ್ದುಪಡಿಸಿರುವುದರಿಂದ ಹಾಗೂ ಈ ಆದೇಶವನ್ನು ಮೇಲಿನ ಎಲ್ಲಾ ನ್ಯಾಯಾಲಯಗಳಲ್ಲೂ ಸಹಾ ಪುರಸ್ಕರಿಸಿ ಅದರಂತೆ ಅಪೀಲುದಾರರಿಗೆ ಮಂಜೂರಾಗಿದ್ದ 0.04 ಗುಂಟೆ ಜಮೀನಿನ ಮಂಜೂರಾತಿ ಯನ್ನು ನಿಯಮ 25 ರಡಿ ಈಗಾಗಲೇ ತಹಸೀಲ್ದಾರ್‌ರವರು ರದ್ದುಪಡಿಸಿ

ರುವುದರಿಂದ 1966 ರಲ್ಲಿ ಡಾ: ರಂಗನಾಥ್‌ರವರಿಗೆ ಮಂಜೂರಾದ ಜಮೀನಿನಲ್ಲಿಯೇ ಅಪೀಲುದಾರರಿಗೆ 0.04 ಗುಂಟೆ ಜಮೀನು ಮಂಜೂರಾಗಿರುವುದು ರುಜುವಾತಾಗಿ, ಡಾ:ರಂಗನಾಥ್‌ರವರ ಮಂಜೂರಾತಿಗೆ ಅಪೀಲುದಾರರ ಮಂಜೂರಾತಿಯು ಅತಿವ್ಯಾಪ್ತಿ (ಓವರ್‌ಲ್ಯಾಪ್) ಆಗಿದೆಯೆಂದು ಖಚಿತವಾಗಿ ಅಭಿಪ್ರಾಯಪಡಲಾಗಿದೆ. ಹಾಗೂ ಈ ವಿಚಾರದಲ್ಲಿ ಪ್ರಶ್ನಿತ ಆದೇಶದಲ್ಲಿ ಉಪವಿಭಾಗಾಧಿಕಾರಿಯವರು ವ್ಯಕ್ತಪಡಿಸಿರುವ ಅಭಿಪ್ರಾಯ ಸಮಂಜಸವಾಗಿದೆ.

3(ಅ) ಡಾ:ರಂಗನಾಥ್‌ರವರಿಗೆ ಈಗಾಗಲೇ 0.10 ಗುಂಟೆ ಜಮೀನು ಮಂಜೂರಾಗಿರುವುದರಿಂದ ಈ ಜಮೀನು ಹೊರತುಪಡಿಸಿ ಬೇರೆ ಜಮೀನು ಲಭ್ಯವಿಲ್ಲದೆ ಇರುವುದು ದಿನಾಂಕ 28.11.2011 ರ ಸ್ಕೆಚ್‌ನಿಂದ ಕಂಡುಬಂದಿರುವುದರಿಂದ ಅಪೀಲುದಾರರಿಗೆ ಅವರ ಕೋರಿಕೆಯಂತೆ 0.04 ಗುಂಟೆ ಜಮೀನು ಮಂಜೂರ್ಮಾಡಲು ಅವಕಾಶವಿರುವುದಿಲ್ಲ.

3(ಇ) ಡಾ:ರಂಗನಾಥ್‌ರವರಿಗೆ 1966 ರಲ್ಲಿಯೇ ಮಂಜೂರಾದ 0.10 ಗುಂಟೆ ಜಮೀನಿಗೆ ನಂತರದಲ್ಲಿ ಅಂದರೆ 1989 ರಲ್ಲಿ ಅಪೀಲುದಾರರಿಗೆ ಮಂಜೂರಾದ 0.04 ಗುಂಟೆ ಪ್ರದೇಶವು ಅತಿವ್ಯಾಪ್ತಿಯಾಗಿರುವುದರಿಂದ ಅಪೀಲುದಾರರಿಗೆ ಮಂಜೂರಾದ 0.04 ಗುಂಟೆ ಪ್ರದೇಶಕ್ಕೆ ಡಾ:ರಂಗನಾಥ್‌ರವರಿಗೆ ಈ ಹಿಂದೆಯೇ ಮಂಜೂರಾದ 0.10 ಗುಂಟೆ ಜಮೀನು ಅತಿವ್ಯಾಪ್ತಿಯಾಗುವ ಪ್ರಶ್ನೆಯೇ ಉದ್ಭವಿಸಿರುವುದಿಲ್ಲ.

ಒಟ್ಟಾರೆ ಪ್ರಕರಣವನ್ನು ಆಮೂಲಾಗ್ರವಾಗಿ ಈ ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಅವಲೋಕಿಸಿದಾಗ, ಅಪೀಲುದಾರರು ಡಾ:ರಂಗನಾಥ್‌ರವರಿಗೆ ಆದ 0.10 ಗುಂಟೆ ಜಮೀನು ಮಂಜೂರಾತಿ ವಿಚಾರದಲ್ಲಿ ಹಾಗೂ ಇವರಿಗೆ ಇದೇ ಜಮೀನಿನಲ್ಲಿ 0.04 ಗುಂಟೆ ಕಾನೂನು ಬಾಹಿರವಾಗಿ ಮಂಜೂರಾದ ಜಮೀನಿನ ಮಂಜೂರಾತಿ/ದುರಸ್ತಿ ರದ್ದತಿ ವಿಚಾರದಲ್ಲಿ ಈಗಾಗಲೇ ಈ ನ್ಯಾಯಾಲಯವು ಸೇರಿದಂತೆ ಮೇಲಿನ ಎಲ್ಲಾ ನ್ಯಾಯಾಲಯಗಳಲ್ಲಿಯೂ ಇವರ ಅಪೀಲು ತಿರಸ್ಕೃತ ಗೊಂಡಿದ್ದರೂ ಸಹಾ ಪದೇ ಪದೇ ಒಂದೇ ವಿಚಾರದಲ್ಲಿ ಅನಾವಶ್ಯಕವಾಗಿ ಮೇಲ್ಮನವಿ ಸಲ್ಲಿಸುತ್ತಿರುವುದು ಕಂಡು ಬಂದಿರುತ್ತದೆ. ಹಾಗೆಯೇ

ಇತ್ತೀಚೆಗೆ ಮಂಡ್ಯ ಜಿಲ್ಲಾ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿಯೂ ಕೂಡ ಹೂಡಿದ್ದ ದಾವೆ ಆರ್‌ಎ 91/2009 ಕೂಡ ದಿನಾಂಕ 20.06.2013 ರಂದು ವಜಾ ಆಗಿರುವುದರಿಂದ ದಿ:27.12.2004 ರ ನ್ಯಾಯಾಲಯದ ನಿರ್ದೇಶನದನುಗುಣವಾಗಿಯೇ ಅಧೀನ ಕಂದಾಯಾಧಿಕಾರಿಗಳು ಸ್ಥಳ ತನಿಖೆ, ಸ್ಕೆಚ್ ಇವುಗಳ ಮೂಲಕ ಖಚಿತಪಡಿಸಿಕೊಂಡು ಅಪೀಲುದಾರರ ಕೋರಿಕೆಯನ್ನು ನಿಯಮ ಬದ್ಧವಾಗಿಯೇ ತಿರಸ್ಕರಿಸಿರುವುದರಿಂದ ಸದರಿ ಆದೇಶಗಳ ಮಧ್ಯೆ ಪ್ರವೇಶಿಸುವ ಯಾವುದೇ ಸಕಾರಣಗಳು ಈ ನ್ಯಾಯಾಲಯ ಗಮನಕ್ಕೆ ಕಂಡುಬಂದಿಲ್ಲ.

ಅಂತೆಯೇ ಪ್ರಸ್ತುತ ಪ್ರಕರಣದಲ್ಲಿ ಕೆಳಕಂಡಂತೆ ಮಾಡಿದ

## ಆದೇಶ

ಅಪೀಲು ತಿರಸ್ಕರಿಸಿದೆ.

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಗಣಕೀಕರಿಸಿ, ಓದಿ, ತಿದ್ದಿ- ದಿನಾಂಕ: 12/11/2013 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಿದೆ.

ಜಿಲ್ಲಾಧಿಕಾರಿ,
ಮಂಡ್ಯ ಜಿಲ್ಲೆ, ಮಂಡ್ಯ.

ಪ್ರಕರಣ ಸಂಖ್ಯೆ. ಆರ್.ಎ.02/2012. ದಿನಾಂಕ:

ಪ್ರತಿಯನ್ನು:
1. ಉಪವಿಭಾಗಾಧಿಕಾರಿ, ಮಂಡ್ಯ ರವರಿಗೆ ಕಡತ ಸಂಖ್ಯೆ ಮೇಲ್ಮನವಿ ದಾವ ದಿನಾಂಕ 11/2011-12 ಆರ್.ಎ.2/ 2008-09 ( ಪುಟ 1 ರಿಂದ 296) ನ್ನು ಲಗತ್ತಿಸಿ ಮುಂದಿನ ಕ್ರಮಕ್ಕೆ ಕಳುಹಿಸಿದೆ.

ಜಿಲ್ಲಾಧಿಕಾರಿ
ಮಂಡ್ಯ ಜಿಲ್ಲೆ.

1) ಶಾಖಾ ಕೋರಿಕೆ ಪತ್ರ
2) ಶಾಖಾ ಕೋರಿಕೆ ದಿನಾಂಕ 26.11.13
3) ತಯಾರಾದ ದಿನಾಂಕ
4) ತಯಾರಾದ್ದು
5) ಹಾಳೆ ಸಂಖ್ಯೆ
6) ನಕಲು ಸ್ಟ್ಯಾಂಪ್
7) ನಕಲು ಫೀ
8) ಹೋಲಿಕೆ
26.11.13

ನಕಲು ದಿನಾಂಕ
26/11